


International Journal of Kannada Research
www.kannadajournal.com

**ISSN: 2454–5813**
IJKR 2024; 10(1): 164-169
© 2024 IJKR
www.kannadajournal.com
Received: 09-11-2023
Accepted: 12-12-2023

**ದ್ಯಾವಣ್ಣ ಸುಂಕೇಶ್ವರ**
ಮುಖ್ಯಸ್ಥರು, ಕನ್ನಡ ವಿಭಾಗ, ಲೊಯೋಲ ಕಾಲೇಜು, ಮಾನವಿ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ದ್ಯಾವಣ್ಣ ಸುಂಕೇಶ್ವರ**
ಮುಖ್ಯಸ್ಥರು, ಕನ್ನಡ ವಿಭಾಗ, ಲೊಯೋಲ ಕಾಲೇಜು, ಮಾನವಿ, ಬೆಂಗಳೂರು, ಕರ್ನಾಟಕ, ಭಾರತ

# ನಾ ಕಂಡಂತೆ ಗೋವಾ

**ದ್ಯಾವಣ್ಣ ಸುಂಕೇಶ್ವರ**

**DOI:** https://doi.org/10.22271/24545813.2024.v10.i1c.951

**ಪೀಠಿಕೆ**

ಗೋವಾ ವಿಸ್ತೀರ್ಣದಲ್ಲಿ ಭಾರತದ ಅತ್ಯಂತ ಚಿಕ್ಕ ರಾಜ್ಯವಾಗಿದೆ. ಸಹ್ಯಾದ್ರಿಯ ಸೆರಗಿನಲ್ಲಿರುವ ಗೋವಾದ ಪೂರ್ವ ಭಾಗ ಮಲೆಗಳ ನಾಡಾಗಿದ್ದು ಅಸಂಖ್ಯಾತ ಜೀವರಾಶಿಗಳಿಗೆ ಆಶ್ರಯ ಕಲ್ಪಿಸಿದೆ. ಇದನ್ನು ಉತ್ತರ ಗೋವಾ ಮತ್ತು ದಕ್ಷಿಣ ಗೋವಾ ಎಂದು ಇಬ್ಭಾಗ ಮಾಡಲಾಗಿದೆ. ಉತ್ತರ ಗೋವಾದ ಆಡಳಿತ ಕೇಂದ್ರ ಪಣಜಿಯಾಗಿದ್ದು, ದಕ್ಷಿಣ ಗೋವಾದ ಆಡಳಿತ ಕೇಂದ್ರ ಮಡಗಾಂವ್ ನಗರವಾಗಿದೆ. ಯುರೋಪಿಯನ್ನರ ಆಗಮನದಿಂದಲೂ ವ್ಯಾಪಾರ, ವಸ್ತುಗಳ ನಿರ್ಯಾತ, ಕೃಷಿ, ಕೈಗಾರಿಕೆ, ಖನಿಜ ಸಂಪತ್ತು, ಮತ್ಸ್ಯೋದ್ಯಮ, ಕಾರ್ಖಾನೆಗಳು, ದೋಣಿಗಳ ನಿರ್ಮಾಣ ಮತ್ತು ದುರಸ್ತಿ, ಪ್ರವಾಸೋದ್ಯಮಕ್ಕೆ ಪ್ರಸಿದ್ಧವಾಗಿದೆ. ಇಲ್ಲಿನ ಸುಂದರವಾದ ನದಿಗಳು ಮತ್ತು ಆಕರ್ಷಕವಾದ ಬೀಚ್‌ಗಳು, ಕೋಟೆಗಳು, ಚರ್ಚ್‌ಗಳು ಮತ್ತು ಹಿಂದೂ ದೇವಾಲಯಗಳಿಗೆ ವಿದೇಶಿಯರು ಮನಸೋಲುತ್ತಿದ್ದಾರೆ. ಇನ್ನು ದೇಶಿಯ ಪ್ರವಾಸಿಗರಿಗಂತೂ ಅಚ್ಚುಮೆಚ್ಚಿನ ತಾಣವಾಗಿದೆ. ಇಲ್ಲಿನ ಮಾತೃಭಾಷೆ ಕೊಂಕಣಿಯಾಗಿದ್ದರೂ ಹಲವು ಭಾಷೆಗಳಲ್ಲಿ ವ್ಯವಹರಿಸಲಾಗುತ್ತದೆ. ಮೂಲತಃ ಇಲ್ಲಿದ್ದವರ ಜನರಿಗಿಂತ ಹೊರ ರಾಜ್ಯದಿಂದ ಬಂದ ವಲಸಿಗರ ಸಂಖ್ಯೆ ಹೆಚ್ಚಿಗೆ ಇರಬಹುದು.

'ಪ್ರವಾಸಿಗರ ಸ್ವರ್ಗ'ವೆಂದೇ ಪ್ರಸಿದ್ಧಿಯಾದ ಗೋವಾ ಮತ್ತು ಅಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನು ಕಣ್ತುಂಬಿಸಿಕೊಳ್ಳಬೇಕೆನ್ನುವ ಹಂಬಲ ಬಹು ದಿನಗಳ ಆಸೆಯಾಗಿತ್ತು. 'ಗೋವಾ' ಶಬ್ದವನ್ನಾಲಿಸಿದ ತಕ್ಷಣವೇ ನನ್ನ ಮನದಲ್ಲಿ ಉಲ್ಲಾಸವು ಇಮ್ಮಡಿಗೊಳ್ಳುತ್ತಿತ್ತು. ಸಮಯ ಮತ್ತು ವಯಸ್ಸು ಸರಿಯುತ್ತಿದ್ದರೂ ಸಕಾಲಕ್ಕಾಗಿ ಕಾಯುತ್ತಿದ್ದೆ. ಒಂದು ದಿನ ಎಲ್ಲಾ ಸಹೋದ್ಯೋಗಿ ಮಿತ್ರರೊಂದಿಗೆ ತೆರಳುವ ಭಾಗ್ಯ ಲಭಿಸಿತು. ಲೊಯೋಲ ಪದವಿ ಪೂರ್ವ ಮತ್ತು ಪದವಿ ಕಾಲೇಜು ಸಿಬ್ಬಂದಿಗಳ ಮಧ್ಯೆ ಗೋವಾ ಪ್ರವಾಸದ ಕುರಿತು ಚರ್ಚಿಸಿದಾಗ ಮುದುಡಿದ ಭಾವನೆಗಳು ಅರಳಿದವು. 9ನೇ ಫೆಬ್ರುವರಿ 2024 ರಂದು ನನ್ನಾಸೆ ನೆರವೇರಿದ ದಿನ. ಅಂದು ಪ್ರವಾಸ ಹೊರಡಲು ಎಲ್ಲ ರೀತಿಯಿಂದಲೂ ಸಿದ್ಧನಾಗಿದ್ದೆ. ನಮ್ಮೆಲ್ಲರನ್ನು ತನ್ನ ಉಡಿಯಲ್ಲಿ ಹಾಕಿಕೊಂಡು ಸಾಗುವ ಬಸ್ಸು ಬಳ್ಳಾರಿಯಿಂದ ಆಗಮಿಸಬೇಕಿತ್ತು. ಆ ದಿನ ಸಮಯ ಸಂಜೆ 8:30 ಆಗಿತ್ತು. ನೀಲಿಯಾಕಾಶದಲ್ಲಿ ಮಿನಗುವ ತಾರೆಗಳಂತೆ ಬಸ್ಸು ತನ್ನ ಹೊರ ಮೈಭಾಗದಲ್ಲಿ ತರತರದ ಬಣ್ಣದ ಬಲ್ಬ್‌ಗಳನ್ನು ಪ್ರಕಾಶಿಸುತ್ತಾ ಕಾಲೇಜಿನ ಆವರಣಕ್ಕೆ ಬಂತು. ಎಲ್ಲರೂ ಬಸ್ಸಿನಲ್ಲಿ ಹತ್ತಿ ಕುಳಿತರು. ಮಧ್ಯದಲ್ಲಿರುವ ಸೀಟ್ ಮೇಲೆ ನಾನು ಕುಳಿತುಕೊಂಡೆ. ನಮ್ಮೆಲ್ಲರ

ಪಯಣ ಸುಖಕರವಾಗಿರಲಿ ಎಂದು ನಮ್ಮ ಲೊಯೋಲ ಸಂಸ್ಥೆಯ ಮುಖ್ಯಸ್ಥರಾದ ಫಾ. ಲಿಯೋ ಪೆರೆರಾ ಅವರು ದೇವರಲ್ಲಿ ಪ್ರಾರ್ಥಿಸಿದರು. ನಾವೆಲ್ಲರೂ ಆ ಪ್ರಾರ್ಥನೆಯಲ್ಲಿ ಭಾಗಿಯಾದೆವು. ನಂತರ ಬಲಭಾಗದಲ್ಲಿರುವ ಗವಾಕ್ಷದ ಗ್ಲಾಸನ್ನು ಸ್ವಲ್ಪ ಹಿಂಬದಿಗೆ ಸರಿಸಿದಾಗ ಒಳನುಗ್ಗಿದ ತಂಪಾದ ಗಾಳಿಯು ನನ್ನ ಭಾವನೆಗಳೆಲ್ಲವನ್ನಾವರಿಸಿ ದೇಹ ಮತ್ತು ಮನಕೆ ನವಚೈತನ್ಯವನ್ನು ನೀಡಿತು. ನನ್ನ ತಲೆಯನ್ನು ಮೆಲ್ಲಗೆ ತಿರುಗಿಸಿ ಹೊರಗಡೆ ನೋಡಿದಾಗ ಗಿಡ ಮರಗಳೆಲ್ಲವೂ ನಮ್ಮ ಪಯಣಕ್ಕೆ ಶುಭಕೋರುವಂತೆ ಹಿಂಬದಿಗೆ ಸರಿದು ನಿಶೆಯಲ್ಲಿ ಮರೆಯಾಗುತ್ತಿದ್ದವು. ಬಸ್ಸಿನಲ್ಲಿನ ಸಹೋದ್ಯೋಗಿ ಮಿತ್ರರ ನೃತ್ಯವು ನಮ್ಮ ಸುದೀರ್ಘ ಪಯಣದ ಹಾದಿಯನ್ನು ಖುಷಿ ಪಡಿಸುತ್ತಿತ್ತು. ನಂತರ ನಿದ್ರಾದೇವತೆಯು ನನ್ನ ಎರಡೂ ಕಣ್ಣುಗಳನ್ನಾವರಿಸಿಕೊಂಡು ರೆಪ್ಪೆಗಳನ್ನು ಮಿಟುಕಿಸದಂತೆ ತಡೆ ಹಿಡಿದು ಮಲಗಿಸಿದಳು.

ಮರುದಿನ ಮೂಡಣದಲ್ಲಿ ಉದಯಿಸಿದ ದಿವಾಕರನು ಇತ್ತ ಬುವಿಯಲ್ಲಿರುವ ಕಾನನವೆಲ್ಲ ಸೀಳಿಕೊಂಡು ಹೊರ ಬಂದಾಗ ನಯನಗಳ ರಕ್ಷಾಕವಚವಾದ ರೆಪ್ಪೆಗಳು ಬಿರಿದವು. ಆಗ ಮುಂಜಾವಿನಲಿ ಮರಗಳ ಮೇಲೆ ಹನಿಹನಿಯಾಗಿ ಆವರಿಸಿದ್ದ ಕಾವಳವು ಕಣ್ಣಿಗೆ ಗೋಚರಿಸಿತು. ವನವಾಸಿಗಳಾದ ಪ್ರಾಣಿ ಪಕ್ಷಿಗಳು ಇಬ್ಬನಿಯಲ್ಲಿ ತಮ್ಮ ಪ್ರತಿಬಿಂಬಗಳನ್ನು ಕಂಡು ನಲಿಯುತ್ತ ಆಶು ಕವಿಗಳಂತೆ ತಮ್ಮ ಧ್ವನಿಗಳಲ್ಲಿ ಕಾಡಿನ ಸೌಂದರ್ಯವನ್ನು ಹಾಡುತ್ತ ಬಣ್ಣಿಸುತ್ತಾ ತೆರಳುತ್ತಿದ್ದವು. ಬಾನುವನ್ನು ಚುಂಬಿಸುತ್ತಿದ್ದ ವೃಕ್ಷಗಳು, ಹಚ್ಚಹಸಿರನ್ನೇ ಧರಿಸಿದ್ದ ಭೂಮಾತೆಯ ಒಡಲು, ನನ್ನಲ್ಲಿ ಬೆರಗು ಮೂಡಿಸಿತು. ವರಕವಿಗಳು ಹೇಳಿದ ಕವಿತೆಯ ತುಣುಕು ನನ್ನಲ್ಲಿ ಒಸರಿತು. ಕಂಡಿತು ಕಣ್ಣು, ಸವಿದಿತು ನಾಲಗೆ, ಪಡೆದೀತೀ ದೇಹ, ಸ್ಪರ್ಶಾ ಪಡೆದೀತೀ ದೇಹ, ಎನ್ನುವಂತೆ ಕಾಂತಾರದಲ್ಲಿ ನಾಗನಡಿಗೆಯಂತೆ ಹರಿದಾಡಿದ ಬಟ್ಟೆಗಳು, ಬಾನಿಗೆ ಮುತ್ತಿಡುವ ತರುಗಳು, ಜುಳುಜುಳು ಹರಿಯುವ ಜಲಪಾತಗಳು, ಹಕ್ಕಿಗಳ ಪಿಸುಮಾತುಗಳೆಲ್ಲವೂ ಭುವನದಲ್ಲಿ ಸ್ವರ್ಗವನ್ನೇ ನಿರ್ಮಿಸಿದ್ದವು. ತಂಪಾದ ಗಾಳಿಯಲ್ಲಿ ಇಂಪಾದ ಇಂಚರವನ್ನು ಕೇಳಿದಾಗ ಪುಳುಕಿತಗೊಂಡೆನು.

ಬೆಳಗಿನ ಜಾವ 8:30 ಆಗಿತ್ತು. ಕರ್ನಾಟಕ ರಾಜ್ಯದ ಗಡಿ ಭಾಗ ಅಂತ್ಯವಾಗಿ ಗೋವಾ ರಾಜ್ಯದ ಸರಹದ್ದಿನೊಳಗೆ ನುಗ್ಗಿದ ರಭಸಕ್ಕೆ ಇಕ್ಕೆಲಗಳಲ್ಲಿ ಬೆಳೆದ ಮರಗಳೆಲ್ಲವೂ ನಮ್ಮನ್ನು ಬರಮಾಡಿಕೊಂಡವು. ಗೋವಾ ಪೊಲೀಸ್‌ರು ಹದ್ದಿನಂತೆ ತಮ್ಮ ಎಲ್ಲೆಯೊಳಗೆ ನುಸುಳುವ ವಾಹನಗಳೆಲ್ಲವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ ತೆರಳಲು ಅನುಮತಿ ನೀಡುತ್ತಿದ್ದರು. ನಮ್ಮ ಪ್ರಯಾಣದ ಬಸ್ಸು ಮುಚ್ಚಿಕೊಂಡಿದ್ದ ತನ್ನ ಅಂಗಾಂಗಗಳೆಲ್ಲವನ್ನೂ ತೆರೆದಿಟ್ಟು ಅವರ ಮನವ ಕದ್ದು ಮುಂದೆ ಸಾಗಿತು. ಪಣಜಿಯಲ್ಲಿ ನಿರ್ಮಿಸಿದ ಪಂಜಿಮ್ ಸೇತುವೆ (ಮಾಂಡೋವಿ ಸೇತುವೆ) ಮೇಲೆ ತೆರಳುತ್ತಿರುವಾಗ ಕಣ್ಣುಗಳನ್ನು ಸುತ್ತಲೂ ಹಾಯಿಸಿದೆ. ಯಾರ ಹಂಗಿಲ್ಲದೆ ವಿಶಾಲವಾಗಿ ಹರಿಯುವ ಮಾಂಡೋವಿ ನದಿಯನ್ನು ನೋಡಿದೆ. ಆರಂಭದಲ್ಲಿ ಮಾಂಡೋವಿ ನದಿಯ ಸ್ವಾಗತಕ್ಕೆ ತಲೆಬಾಗಿದೆ. ಈ ನದಿ ಗೋವಾ ರಾಜ್ಯದ ಜೀವನಾಡಿಯಾಗಿದೆ. ಮಾಂಡೋವಿ ನದಿಯನ್ನು ನಮ್ಮ ಕರ್ನಾಟಕದಲ್ಲಿ ಮಹಾದಾಯಿ ನದಿಯೆಂದು ಕರೆಯುತ್ತಾರೆ. ಇದು ನಮ್ಮ ಬೆಳಗಾವಿ ಜಿಲ್ಲೆಯ ಭೀಮಗಡ ವನ್ಯಜೀವಿ ಅಭಯಾರಣ್ಯದಲ್ಲಿ ಹುಟ್ಟಿ, ಗೋವಾದಲ್ಲಿ ಹರಿದು ಅಂತಿಮವಾಗಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಕರ್ನಾಟಕ ಮತ್ತು ಗೋವಾ ಸರಕಾರಗಳ ಮಧ್ಯೆ ವ್ಯಾಜ್ಯಕ್ಕೆ ಕಾರಣವಾಗಿದ್ದು ಇದೇ ನದಿ. ಕರ್ನಾಟಕ ಸರಕಾರದ ಪ್ರಮುಖ ಉದ್ದೇಶವೆಂದರೇ, ಮಾಂಡೋವಿ ನದಿಯ ಉಪನದಿಗಳಾದ ಕಳಸಾ-ಬಂಡೂರಿ ತೊರೆಗಳಿಗೆ ಆಣೆಕಟ್ಟುಗಳನ್ನು ನಿರ್ಮಿಸಿ 7.56 ಟಿಎಮ್ ಸಿ ನೀರನ್ನು ಮಲಪ್ರಭಾ ನದಿಗೆ ಸೇರಿಸುವುದು. ಇದರ ಮುಖಾಂತರ ಬೆಳಗಾವಿ, ಬಾಗಲಕೋಟೆ, ಧಾರವಾಡ ಮತ್ತು ಗದಗ ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದು. ಆದರೆ ಗೋವಾ ಸರಕಾರವು ಇದಕ್ಕೆ ಅಡ್ಡಿಪಡಿಸುತ್ತಿದೆ. ಇಲ್ಲಿಯವರೆಗೂ ಕಳಸಾ-ಬಂಡೂರಿ ನಾಲಾ ಯೋಜನೆಯು ಅನಿಶ್ಚಿತವಾಗಿಯೇ ಉಳಿದಿದೆ. ಮುಂದಿನ ದಿನಮಾನಗಳಲ್ಲಿ ಕಣ್ಣ ಮುಂದೆ ನದಿಗಳ ನೀರು ಹರಿಯುತ್ತಿದ್ದರೂ ಅದನ್ನು ಸುಮ್ಮನೇ ನೋಡುತ್ತಲೇ ದಾಹ ತೀರಿಸಿಕೊಳ್ಳುವಂತಹ ಪರಿಸ್ಥಿತಿ ಬಂದರೂ ಆಶ್ಚರ್ಯವೇನಿಲ್ಲ.

ಅಲ್ಲಿಂದ ನೇರವಾಗಿ ನಾವೆಲ್ಲರೂ ಝೇವಿಯರ್ ಧ್ಯಾನಾಶ್ರಮದ ಸ್ಥಳಕ್ಕೆ ತಲುಪಿದಾಗ ಸಮಯ ಬೆಳಿಗ್ಗೆ 11:00 ಗಂಟೆಯಾಗಿತ್ತು. ಸುಮಾರು 14 ವರ್ಷದ ಹಳೆಯ ಬಸ್ಸು ಮತ್ತು ಚಾಲಕನ ಮಧ್ಯೆ ಹೇಳಿ ಮಾಡಿಸಿದಂತಹ ಜೋಡಿಯಾಗಿತ್ತು. ಬಾಲ್ಯದಲ್ಲಿ ಎತ್ತಿನ ಬಂಡಿಯ ಮೇಲೆ ಸಾಗಿದ್ದ ಅನುಭವವನ್ನು ಮರಳಿ ಪಡೆಯುವಂತೆ ಮಾಡಿದ್ದನು. ಆಶ್ಚರ್ಯವೇನೆಂದರೆ, ಬಂಡಿಯು ವೇಗವಾಗಿ ಹೋದಾಗ ಅದರ ಎರಡೂ ಬದಿಯ ಚಕ್ರದ ಹಳಿಗಳ ಪಟ್ಟಿ ಸಡಿಲವಾಗುತ್ತದೆ, ಅಂತೆಯೇ ನಮ್ಮ ಪ್ರಯಾಣದ ಬಸ್ಸು ವೇಗವಾಗಿ ಹೋದರೆ, ಅದರ ಭಾಗಗಳೆಲ್ಲವೂ ಕಳಚಿ ಬೀಳುತ್ತಿದ್ದವೇನೋ! ಅಂತೂ ತಡವಾಗಿಯಾದರೂ ಸುರಕ್ಷಿತವಾಗಿ ನಮ್ಮನ್ನು ಗೋವಾಕ್ಕೆ

ತಲುಪಿಸಿದನು. ನಮ್ಮ ಪ್ರವಾಸದ ಸಂಯೋಜಕರಾದ ಖಾಸಿಂ ಸಾಬ್ ಮತ್ತು ಶೃತಿ ದೇಸಾಯಿ ಅವರು ಫಾ. ಪ್ರವೀಣ್ ಕುಮಾರ್ ಅವರ ಆಪ್ತ ಪರಿಚಯಸ್ಥರ ನೆರವಿನಿಂದ ಎಲ್ಲರಿಗೂ ಝೇವಿಯರ್ ಧ್ಯಾನಾಶ್ರಮದ ವಸತಿ ಕೊಠಡಿಗಳಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಿದ್ದರು. ಅಲ್ಲಿನ ವಸತಿ ವ್ಯವಸ್ಥಾಪಕರು ನಮ್ಮನ್ನು ಪ್ರೀತಿ ಪೂರ್ವಕವಾಗಿ ಬರಮಾಡಿಕೊಂಡರು. ಸುಮಾರು 14:30 ತಾಸುಗಳ ಸುದೀರ್ಘ ಪಯಣದಿಂದ ದೇಹದಲ್ಲಿ ನೀರಿನಾಂಶ ಕಡಿಮೆಯಾಗಿ ಬಾಯಿ ಒಣಗಿತ್ತು. ಉದರ ತಾಳ ಹಾಕುತ್ತಿತ್ತು. ಅಡುಗೆ ಸಹಾಯಕ ತಂಡದವರು ಅಡುಗೆ ಸಿದ್ಧಪಡಿಸಲು ಎಲ್ಲಾ ಸಾಮಾಗ್ರಿಗಳನ್ನು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಸ್ವಲ್ಪ ಸಮಯದ ನಂತರ ನಮಗೆ ಒದಗಿಸಲಾದ ವಿರಾಮದ ಕೋಣೆಗೆ ತೆರಳಿದೆವು. ಸೂರ್ಯೋದಯದಿಂದ ಟೀ ಕಾಫಿ ಕಾಣದ ಹಲ್ಲುಗಳನ್ನು ಉಜ್ಜಿದೆ. ಪಯಣದಿಂದ ದಣಿದ ದೇಹವನ್ನು ನೋವು ನಿವಾರಕ ಮಾತ್ರೆಯಾದ ನಿದ್ರೆಯು ಆವರಿಸಿದಾಗ ಸ್ವಲ್ಪ ವಿಶ್ರಾಂತಿ ಪಡೆದೆ.

ಝೇವಿಯರ್ ಧ್ಯಾನಾಶ್ರಮವು ನೋಡಲು ತುಂಬ ಸುಂದರವಾಗಿದ್ದು ಬಾಗಾ ಬೀಚ್ ದಂಡೆಯ ಮೇಲೆ ಕಟ್ಟಿಸಲಾಗಿದೆ. ಅಲ್ಲಿನ ಸಾವಿರಾರು ಪ್ರವಾಸಿಗರ ಕಣ್ಮನವನ್ನು ತನ್ನೆಡೆಗೆ ಸೆಳೆಯುತ್ತಿದೆ. ಜೀವನದ ಬಗ್ಗೆ ಜಿಗುಪ್ಸೆಗೊಂಡವರಿಗೆ ಮತ್ತು ನಾಸ್ತಿಕವಾದಿಗಳಿಗೆ ದೈಹಿಕ, ಮಾನಸಿಕ, ಆಧ್ಯಾತ್ಮಿಕ, ದೇವರು ಮತ್ತು ಪ್ರಕೃತಿಯ ಸಂಬಂಧ, ಜೀವರಾಶಿಗಳಲ್ಲಿ ದೇವರ ಇರುವಿಕೆ ಮತ್ತು ಧ್ಯಾನದ ಪ್ರಾಮುಖ್ಯತೆಯ ಕುರಿತು ಅರಿವು ಮೂಡಿಸಲಾಗುತ್ತದೆ. ಕ್ರೈಸ್ತ ಧರ್ಮದಲ್ಲಿ ಕಥೋಲಿಕ್ ಗುರುಗಳು ಪರೋಪಕಾರಿ ಜೀವಿಗಳು. "ಪರೋಪಕಾರಾರ್ಥಂ ಇದಂ ಶರೀರಂ" ಎನ್ನುವ ವಾಣಿಯಂತೆ ತಮ್ಮ ಇಡೀ ಜೀವಮಾನವನ್ನೆಲ್ಲ ದೀನ ದಲಿತರು, ನಿರ್ಗತಿಕರು ಮತ್ತು ಬಡವರ ಸೇವೆಗಾಗಿಯೇ ಮುಡಿಪಾಗಿಡುತ್ತಾರೆ. ಯೇಸುಸಭೆಯ ಸದಸ್ಯರು ಶಿಕ್ಷಣ, ಸಮಾಜ ಸೇವೆ ಮತ್ತು ಪ್ರಾಂತೀಯ ಭಾಷೆಗಳಿಗೆ ನೀಡಿದ ಕೊಡುಗೆ ಅವಿಸ್ಮರಣೀಯ. ನಮ್ಮ ಪ್ರಾಚಾರ್ಯರಾದ ಫಾ ವಿನೋದ್ ಪೌಲ್ ಅವರು ಝೇವಿಯರ್ ಧ್ಯಾನಾಶ್ರಮದಲ್ಲಿ ಕಾರ್ಯ ನಿರ್ವಹಿಸಿದ ಓರ್ವ ಫಾದರ್ ಅವರ ತ್ಯಾಗದ ಕುರಿತು ತಿಳಿಸಿದರು. "ಒಮ್ಮೆ ಓರ್ವ ವ್ಯಕ್ತಿ ಬಾಗಾ ಬೀಚನ ಪೆಂಡಭೂತ ಅಲೆಗಳಿಗೆ ಕೊಚ್ಚಿಕೊಂಡು ಹೋಗುತ್ತಿದ್ದನು, ಆ ವೇಳೆಯಲ್ಲಿ ಅವನನ್ನು ರಕ್ಷಿಸಲು ಝೇವಿಯರ್ ಧ್ಯಾನಾಶ್ರಮದ ಫಾದರ್ ಅವರು ಸಮುದ್ರಕ್ಕೆ ಧುಮಿಕಿದರು. ಒಂದು ಜೀವ ಉಳಿಸಲು ಹೋಗಿ ತಮ್ಮ ಜೀವವನ್ನೇ ತ್ಯಾಗ ಮಾಡಿದರಂತೆ" ಎಂದು ಹೇಳಿದಾಗ ಆ ಘಟನೆಯನ್ನಾಲಿಸಿದ ನನ್ನೆದೆಯು ಕ್ಷಣವೊತ್ತು ಸ್ತಬ್ಧವಾಗಿ ಮನವು ಮೌನಕ್ಕೆ ಜಾರಿತು.

ಕಣ್ಣ ಮುಂದೆ ಬಾಗಾ ಬೀಚ್ ಇದೆ. ಅದರಲ್ಲಿ ಸಾಹಸ ಕ್ರೀಡೆಗಳಾದ ಪ್ಯಾರಾಸೈಲಿಂಗ್, ಸ್ಕೂಬಾಡೈವಿಂಗ್, ಜೆಟ್‌ಸ್ಕಿಯಿಂಗ್ ಮತ್ತು ವಿಂಡ್‌ಸರ್ಫಿಂಗ್ ಆಟಗಳು ಆಡುವುದನ್ನು ನೋಡಿ ಆನಂದಿಸಬಹುದು ಅಷ್ಟೇ! ಎಲ್ಲದಕ್ಕೂ ಹಣವಿರಬೇಕು. "ಹಣವನ್ನು ಕಂಡರೆ, ಹೆಣವೂ ಬಾಯಿ ಬಿಡುತ್ತೆ" ಎನ್ನುವ ಗಾದೆಯೂ ಹಾಸ್ಯಾಸ್ಪದವೆನಿಸಿದರೂ ಇದರಲ್ಲಿ ಸತ್ಯ ಅಡಕವಾಗಿದೆ. ಕೆಲವೊಂದು ವಸ್ತುಗಳಿಂದ ಮನೋರಂಜನೆ ಪಡೆಯಲು ನಮ್ಮಲ್ಲಿ ಹಣ ಇರಬೇಕು. ಆದರೆ ಹಲವು ತೊರೆಗಳಿಂದ ನಿರ್ಮಾಣವಾದ ಕಡಲಿನಲ್ಲಿ ಈಜಲು ಹಣದ ಅಗತ್ಯವಿದೆಯೇ? ದೇವರಿಂದ ಸೃಷ್ಟಿಯಾದ ಈ ವಿಸ್ಮಯದ ಜಗತ್ತನ್ನು ಕಂಡು ನಿರ್ಧನಿಕರು ಆನಂದಿಸಬಹುದಲ್ಲವೇ? ಎಲ್ಲವೂ ಅವರವರ ಮನಸ್ಥಿತಿಯ ಮೇಲೆ ನಿರ್ಧಾರವಾಗುತ್ತದೆ. ನನ್ನ ಮನವು ಬಾಗಾ ಬೀಚ್‌ನಲ್ಲಿ ಈಜಲು ಹಾತೊರೆಯುತ್ತಿತ್ತು. ಆದರೆ ಭಯವು ನನ್ನನ್ನಾವರಿಸಿತ್ತು. ನಮ್ಮ ಹಳ್ಳಿಯಲ್ಲಿರುವ ಬಾವಿ ಮತ್ತು ಹಳ್ಳದಲ್ಲಿ ಈಜಲು ಎಂದೂ ಭಯಪಟ್ಟವನಲ್ಲ. ಎಂತಹ ಆಳವಾದ ಸ್ಥಳವಾಗಿರಲಿ, ತಳ ಮುಟ್ಟಿ ಪಂಕನ್ನೋ ಅಥವಾ ಮರಳನ್ನೋ ಮುಷ್ಟಿಯಲ್ಲಿ ಬಿಗಿ ಹಿಡಿದು ಹೊರಗಡೆ ತರುತ್ತಿದ್ದೆ. ಆದರೆ ಅಪರೂಪಕ್ಕೆ ಕಾಣುವ ಕಡಲಿನಲ್ಲಿ ಈಜುವುದೆಂದರೆ ಎಲ್ಲರಿಗೂ ಭಯ! ಸ್ವಲ್ಪ ವಿಶ್ರಾಂತಿ ಪಡೆದು ನಮ್ಮ ಗೆಳೆಯರ ಬಳಗದೊಂದಿಗೆ ನೋಡಲು ತೆರಳಿದೆನು. ನಾವಿದ್ದ ಸ್ಥಳದಿಂದ ಬೀಚ್ ತಲುಪಲು ಒಂದು ಕಿಲೋಮೀಟರ್ ಸುತ್ತುವರೆದು ಆಗಮಿಸಬೇಕಿತ್ತು. ಸ್ವಲ್ಪ ಹತ್ತಿರದಲ್ಲಿಯೇ ಹರಿಯುತ್ತಿದ್ದ ನೀರಿನಲ್ಲಿ ಕ್ರಮಿಸಿದರೆ ಆ ದಂಡೆಗೆ ತಲುಪಲು ಕ್ಷಣ ಹೊತ್ತು ಸಾಕು. ಹಾಗಾಗಿಯೇ ಎಲ್ಲರೂ ಸೂಕ್ತವಾದ ಮತ್ತು ಸರಳ ಮಾರ್ಗವನ್ನು ಅನುಸರಿಸಿದೆವು. ಅಲ್ಲಿದ್ದ ಯಾಂತ್ರಿಕದ ಹಡಗಿನ ನಾವಿಕನಿಗೆ 500 ರೂಪಾಯಿಗಳನ್ನು ಕೈಗೆ ಕೊಟ್ಟಾಗ ನಮ್ಮನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಸಿದನು.

ಬಾಗಾ ಬೀಚ್ ಮರಳು ದಂಡೆಯ ಮೇಲೆ ನನ್ನ ಮೊದಲ ಪಾದಾರ್ಪಣೆ. ಉತ್ಸಾಹದಲ್ಲಿ ನನ್ನ ಅಭಿದಾನದ ಮೊದಲ ಅಕ್ಷರವನ್ನು ತೋರ್ ಬೆರಳಿನಿಂದ ಮರಳಿನ ಎದೆಯ ಬಗೆದು ಗೀಚಿದೆ. ಹಾಗೆಯೇ ರಸಾನುಭವದಿಂದ ಬಹುದೂರದವರೆಗೆ ಕಣ್ಣಿನ ದೃಷ್ಟಿ ಹಾಯಿಸಿದೆ. ಯಾವ ಕಡೆ ನೋಡಿದರೂ ನೀರು. ಪರವಶನಾಗಿ ಅದನ್ನೇ ನೋಡುತ್ತಾ ನಿಂತೆ. ದೃಷ್ಟಿ ಬಹುದೂರದವರೆಗೆ

ಸಾಗಿದ್ದರಿಂದ ತುಂಬಾ ಹತ್ತಿರದಲ್ಲಿಯೇ ಬಾನು ಮತ್ತು ಕಡಲು ಬೆಸೆದುಕೊಂಡಂತಹ ಅನುಭವ ಭಾಸವಾಯಿತು. ದಂಡೆಯೆಡೆಗೆ ಅಲೆಗಳು ಅಪ್ಪಳಿಸಿದಂತೆ ನನ್ನ ಮನುಸು ನೀರಲ್ಲಿ ತೇಲಾಡಲು ಹುರಿದುಂಬಿಸುತ್ತಿತ್ತು. ಕೊನೆಗೆ ಮನಸ್ಸಿನ ಬಂಧಿಯಲ್ಲಿ ಸೆರೆಯಾಳಾದ ನಾನು ವಾರಿಧಿಯಲ್ಲಿ ಧುಮಿಕಿದೆ. ಸೂರ್ಯನ ಕಿರಣಗಳಿಗೆ ಕುಮುದವು ಅರಳುವಂತೆ ಅಲೆಗಳ ಸ್ಪರ್ಶಕ್ಕೆ ನನ್ನ ದೇಹದ ನರನಾಡಿಗಳೆಲ್ಲವೂ ಒಂದು ಕ್ಷಣ ರೋಮಾಂಚನಗೊಂಡವು. ಲವಣಯುಕ್ತವಾದ ನೀರು ಬಾಯಿ, ಮೂಗಿನ ಹೊಳ್ಳೆ ಮತ್ತು ಕಣ್ಣುಗಳಲ್ಲಿ ಹೋದಾಗ ಅಸ್ವಾಧ, ನೆತ್ತಿಗೇರಿದ್ದು, ಉರಿದ ಯಾತನೆಯಲ್ಲಿಯೂ ಖುಷಿಯ ಅನುಭವ ನನಗಾಯಿತು. ಆದರೂ ಏನೋ ಉಲ್ಲಾಸ, ಅಲೆಗಳಿಗೆದುರಾಗಿ ಈಜುವುದು, ಮೀನುಗಳ ನಡಿಗೆಯಂತೆ ಸಾಗುವುದು, ಮೂಗು ಮುಚ್ಚಿಕೊಂಡು ಮುಳುಗಿ ಏಳುವುದು, ಆ ಖುಷಿಯ ಮುಂದೆ ಯಾವುದೇ ನೋವುಗಳು ಮನಕ್ಕೆ ತಾಕಲಿಲ್ಲ. ಕೆಲವೊಮ್ಮೆ ರಭಸವಾಗಿ ಬರುವ ಅಲೆಗಳ ಆರ್ಭಟಕ್ಕೆ ಮನಸೋಲುತ್ತಿದ್ದೆವು. ಲೋಕಾರೂಢಿಯಲ್ಲಿ ಬಳಸುವಂತಹ ಮಾತು 'ಅಲೆಗಳ ವಿರುದ್ಧ ಈಜಿ ಗೆದ್ದವನೇ ಶೂರ' ಎಂಬ ಪ್ರತೀತಿ ಇದೆ. ಅಲೆಗಳಿಗೆದುರಾಗಿ ಈಜುವುದೆಂದರೆ ಸಾಮಾನ್ಯವಲ್ಲ. ಅದರ ಸೆಳೆತಕ್ಕೆ ಸೋಲುಣ್ಣುವವರೇ ಹೆಚ್ಚು. ನೀರಲ್ಲಿ ಆಡುವಾಗ ಆಕಸ್ಮಿಕವಾಗಿ ಜರುಗಿದ ಘಟನೆಯೊಂದು ನಮ್ಮೆಲ್ಲರಿಗೆ ದಿಗಿಲುಂಟುಮಾಡಿತು. ನಮ್ಮ ಪ್ರವಾಸದ ಸಂಯೋಜಕರಾದ ಖಾಸಿಂ ಸಾಬ್ ಅವರು ನನ್ನ ಭುಜದ ಮೇಲೆ ಹತ್ತಿ ಕೂಡಲು ಹಲವು ಬಾರಿ ಪ್ರಯತ್ನಸಿದರಾದರೂ ಯಶಸ್ವಿಯಾಗಿರಲಿಲ್ಲ. ಸೆಳೆತದಲೆಗಳ ಸವಾರಕ್ಕೆ ಕೊಚ್ಚಿಕೊಂಡು ಹೋಗುತ್ತಿದ್ದರು. ಒಮ್ಮೆ ಅಲೆಗಳಿಗೆದುರಾಗಿ ಈಜುತ್ತಿರಬೇಕಾದರೆ, ಕ್ಷಣಾರ್ಧದಲ್ಲಿಯೇ ಮಾಯವಾಗಿ ಬಿಟ್ಟಿದ್ದರು. ನಾನು ಮತ್ತು ಫಾ. ವಿನೋದ್ ಅವರು ಗುಂಪಿನಲ್ಲಿ ಸ್ವಲ್ಪ ಹೊತ್ತು ಹುಡುಕಿದರೂ ಕಾಣಲಿಲ್ಲ. ದೈತ್ಯ ಅಲೆಗಳು ಅವರನ್ನು ನೀರಿನೊಳಗೆ ಅದೆಲ್ಲಿಗೆ ಎಳೆದೊಯ್ದವೋ! ಎಂದು ಭಯ ಪಟ್ಟಿದ್ದೆವು. ಅದೃಷ್ಟವಶಾತ್ ಅವರು ಮರಳಿನ ದಂಡೆಯ ಮೇಲೆ ಮಲಗಿದ್ದ ದೃಶ್ಯವನ್ನು ಕಂಡಾಗ ಸಂತೋಷವಾಯಿತು.

ಅಲ್ಲಿಂದ ಮರಳಿ ವಸತಿ ಕೋಣೆಗಳಿಗೆ ಬಂದೆವು. ಪುನಃ ಸಿಹಿ ನೀರಿನಿಂದ ಜಳಕ ಮಾಡಬೇಕಿತ್ತು. ಏಕೆಂದರೆ ನನ್ನ ಮೈ,ಕೈ, ಕಾಲುಗಳು ಮತ್ತು ತಲೆಗೂದಲು ಉಪ್ಪಿನಾಂಶದಿಂದ ಕೂಡಿತ್ತು. ಅರೆಚಲ್ಲಣದೊಳಗೆ ಅವಿತುಕೊಂಡಿದ್ದ ಉಸುಕು ಕಾಟ ಕೊಡುತ್ತಿತ್ತು. ಆದ್ದರಿಂದ ಬಚ್ಚಲ ಕೋಣೆಗೆ ಹೋಗಿ ಜಳಕ ಮಾಡಿದೆ. ದೇಹ ಮತ್ತು ಮನಸ್ಸು ಹಗುರಾಯಿತು. ಮಧ್ಯಾಹ್ನದ ಬಾಡೂಟವನ್ನು ಸೇವಿಸಿ ವಸ್ತುಗಳನ್ನು ಖರೀದಿಸಲು ಮಾರ್ಕೆಟ್‌ಗೆ ತೆರಳಿದೆವು. ಅಂಜುನಾ ಬೀಚ್ ಹತ್ತಿರ ಗ್ರಾಹಕರಿಗೆ ಸರಕುಗಳನ್ನು ಒದಗಿಸಲು ಚಿಕ್ಕ ಚಿಕ್ಕ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಅಲ್ಲಿನ ವ್ಯಾಪಾರಸ್ಥ ಮಹಿಳೆಯರ ಜೊತೆಯಲ್ಲಿ ಕೆಲವು ನಿಮಿಷಗಳವರೆಗೆ ಸಂವಾದ ಮಾಡಿದಾಗ ಅವರಲ್ಲಿ ಕೆಲವರು ನಮ್ಮ ಕರ್ನಾಟಕದ ಗದಗ ಜಿಲ್ಲೆಯಿಂದ ಬಂದವರೆಂದು ಗೊತ್ತಾಯಿತು. ಹೊರ ರಾಜ್ಯಗಳಲ್ಲಿಯೂ ಕಷ್ಟಪಟ್ಟು ದುಡಿಯುತ್ತಿರುವ ನಮ್ಮ ನಾಡಿನ ಜನ ಸಮೂಹವನ್ನು ಕಂಡಾಗ ಕನ್ನಡ ನಾಡಿನ ಹಿರಿಮೆ, ಗರಿಮೆ, ಪ್ರೀತಿ, ವಾತ್ಸಲ್ಯ ಉಕ್ಕಿ ಹರಿಯಿತು. ಇವರೆಲ್ಲ ನೂರಾರು ವರ್ಷಗಳ ಹಿಂದೆ ಗೋವಾಕ್ಕೆ ಆಗಮಿಸಿ, ಗೋವಾದಲ್ಲಿಯೇ ನೆಲೆಯೂರಿ, ಬಾಡಿಗೆ ಮನೆಯಲ್ಲಿ ವಾಸವಿದ್ದು, ಅಲ್ಲಿಯೇ ಬೆಳೆದು, ಬದುಕು ದೂಡಲು ಚಿಕ್ಕಪುಟ್ಟ ಮಳಿಗೆಗಳನ್ನು ಆರಂಭಿಸಿಕೊಂಡು ವ್ಯಾಪಾರಗಳನ್ನು ಮಾಡುತ್ತಿದ್ದಾರೆ. ಅಲ್ಲಿರುವ ಬಹುಸಂಖ್ಯಾತ ಕನ್ನಡಿಗರು ಬಹುಭಾಷಾ ವಿಶಾರದರು. ಗ್ರಾಹಕರು ವಸ್ತುಗಳನ್ನು ಕೊಂಡುಕೊಳ್ಳಲು ಬಂದಾಗ ಅವರ ಜೊತೆಯಲ್ಲಿ ಕನ್ನಡ, ಇಂಗ್ಲೀಷ್, ಹಿಂದಿ, ಕೊಂಕಣಿ ಭಾಷೆಗಳಲ್ಲಿ ವ್ಯವಹರಿಸುತ್ತಿದ್ದ ರೀತಿಯನ್ನು ನೋಡಿದಾಗ ನಾವೆಲ್ಲರೂ ಮೂಕ ವಿಸ್ಮಿತರಾದೆವು. ಆ ಮಳಿಗೆಗಳಲ್ಲಿ ಮಹಿಳೆಯರು ಧರಿಸುವ ವಿವಿಧ ಉಡುಗೆ-ತೊಡುಗೆಗಳು ಮತ್ತು ಕೃತಕ ಆಭರಣಗಳನ್ನು ನಮ್ಮಲ್ಲಿದ್ದ ಕೆಲವು ಮಹಿಳೆಯರು ಕೊಂಡುಕೊಂಡರು. ಬೆಳ್ಳಕ್ಕಿಗಳು ಮರಳಿ ತಮ್ಮ ಗೂಡನ್ನು ಸೇರುವಂತೆ ನಾವೆಲ್ಲರೂ ನಮ್ಮ ಝೇವಿಯರ್ ಧ್ಯಾನಾಶ್ರಮವನ್ನು ಸೇರಿದೆವು.

ಗೋವಾದಲ್ಲಿರುವ ಕ್ಯಾಸಿನೊ ಆಟಗಳನ್ನು ವೀಕ್ಷಿಸಲು ನಮ್ಮಲ್ಲಿದ್ದ ಕೆಲವರಿಗೆ ಕುತೂಹಲ ಕೆರಳಿಸಿತ್ತು. ಅವರಲ್ಲಿಯೇ ಮಾತನಾಡಿಕೊಂಡು ತೆರಳಲು ಸಿದ್ದರಾದರು. ಆ ಗುಂಪಿನಲ್ಲಿದ್ದ ಕೆಲವರು ನನ್ನನ್ನು ವಿನಯದಿಂದ ಕರೆದಾಗ ಹೋಗಲು ನಿರಾಕರಿಸಿದೆ. ಏಕೆಂದರೆ ಕ್ಯಾಸಿನೊ ಎಂದಾಕ್ಷಣ ಅವರಿವರು ಗುಣಗಾನ ಮಾಡಿ ಬಣ್ಣಿಸಿದ್ದನ್ನು ಕೇಳಿದ್ದೆ. ಅದು ಶ್ರೀಮಂತರ ಜಗತ್ತು, ಅಲ್ಲಿ ದುಡ್ಡಿದ್ದವನೇ ದೊಡ್ಡಪ್ಪ. ಗೋವಾದ ಕ್ಯಾಸಿನೊಗಳಲ್ಲಿ ಭೂ ಆಧಾರಿತ ಕ್ಯಾಸಿನೊಗಳು ಮತ್ತು ಕಡಲಾಚೆಯ ಕ್ಯಾಸಿನೊಗಳನ್ನು ಕಾಣಬಹುದು. ಅವುಗಳಲ್ಲಿ ಆಡುವ ಆಟಗಳೆಂದರೆ, ಹೈಕಾರ್ಡ್, ಅಂದರ್ ಬಾಹರ್, ರಮ್ಮಿ, ಬ್ಲ್ಯಾಕ್‌ಜಾಕ್, ಬ್ಯಾಕರಟ್, ರಮ್ಮಿ, ರೂಲೆಟ್, ಪೋಕರ್, ಸ್ಲಾಟ್ಗಳು ಇನ್ನಿತರ 72 ಆಟಗಳನ್ನು ಆಡಬಹುದು. ಭಾರತದ ಸಾಂಪ್ರಾದಾಯಿಕ

ನೃತ್ಯಗಳು, ಧರೆಗಿಳಿದು ಬಂದ ಅಪ್ಸರೆಯರಂತೆ ಕಾಣುವ ಚೆಲುವೆಯರನ್ನು ಇಲ್ಲಿ ನೋಡಬಹುದು. ಕ್ಯಾಸಿನೊ ಆಟಗಳನ್ನು ಹೊಂದಿರುವ ಹಡಗುಗಳು, ರೆಸಾರ್ಟ್‌ಗಳು, ಹೋಟೆಲ್‌ಗಳು ಮೋಜು ನೀಡುವ ಮನೋರಂಜನೆಯ ತಾಣಗಳಾಗಿವೆ. ಪ್ರವಾಸಿ ಋತುವಿನಲ್ಲಿ ಅನೇಕರು ಈ ಕ್ಯಾಸಿನೊಗಳಿಗೆ ಭೇಟಿ ನೀಡುತ್ತಾರೆ. ಇಂತಹ ಸ್ಥಳಗಳಿಗೆ ನಾನು ಭೇಟಿ ನೀಡದಿರಲು ಕಾರಣವಿತ್ತು. ಒಬ್ಬ ವ್ಯಕ್ತಿ ಕ್ಯಾಸಿನೊ ಇರುವ ಬೋಟಿನೊಳಗಡೆ ಪ್ರವೇಶಿಸಲು ಪ್ರವೇಶ ಶುಲ್ಕ 2500 ರೂಪಾಯಿಗಳನ್ನು ಪಾವತಿಸಬೇಕಾಗಿತ್ತು. ಅಷ್ಟೊ ಹಣವನ್ನು ಕೊಟ್ಟು ಪಾವತಿಸುವಷ್ಟು ಸಾಮರ್ಥ್ಯ ನನ್ನ ಹತ್ತಿರ ಇದ್ದಿಲ್ಲ. ಉಳಿದವರು ಊಟ ಮುಗಿಸಿಕೊಂಡು ಮನೋರಂಜನೆಗಾಗಿ ಧಮ್ ಚರಾಡ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿದೆವು. ಎರಡೂ ಗುಂಪುಗಳ ಮಧ್ಯೆ ಗೆಲುವಿಗಾಗಿ ವಾದ ವಿವಾದಗಳು ನಡೆದು ಕೊನೆಗೆ ವಿಜಯಲಕ್ಷ್ಮೀ ಯಾರಿಗೂ ಒಲಿಯಲಿಲ್ಲ. ಎಲ್ಲರೂ ಸಂಭ್ರಮಿಸಿದ ನಂತರ ಮಲಗಲು ತಮ್ಮ ತಮ್ಮ ಕೊಠಡಿಗಳಿಗೆ ತೆರಳಿದರು. ಆದರೆ ನಾನು ಮಾತ್ರ ಬಾಗಾ ಬೀಚ್‌ನ ದಂಡೆಯಲ್ಲಿ ಪ್ರವಾಸಿಗರು ಮಾಡುತ್ತಿರುವ ನೃತ್ಯವನ್ನು ವೀಕ್ಷಿಸಿ, ಸಂಗೀತವನ್ನು ಆಲಿಸಿದ ನಂತರ ಮಲಗಲು ತೆರಳಿದೆ.

ಮಾರನೆಯ ದಿನ, ನೇಸರನು ತನ್ನನ್ನೇ ಹಿಂಬಾಲಿಸುತ್ತಿದ್ದ ತಮವನ್ನು ಕಳಚಿಕೊಂಡು ಬಂದಂತೆ, ನಾನು ಹೊದಿಕೆ ಕಳಚಿಕೊಂಡು ಹೊರಬಂದಾಗ ಬೆಳಗಿನ ಜಾವ 6:00 ಗಂಟೆಯಾಗಿತ್ತು. ಶುಭ್ರವಾದ ಶರಧಿಯು ಅಶುದ್ಧಗೊಳಿಸಿದ ಮಾನವರಿಂದ ಮುಕ್ತಗೊಂಡಿತ್ತು. ಆಮೆಗಳು, ಮತ್ಸ್ಯಗಳು, ಏಡಿಗಳು, ಇನ್ನಿತರ ಜಲಚರ ಜೀವರಾಶಿಗಳು ನೆಮ್ಮದಿಯಿಂದ ವಿಹರಿಸುತ್ತಿದ್ದವು. ಸೂರ್ಯನು ತನ್ನ ಪ್ರತಿಬಿಂಬವನ್ನು ಕಂಡು ಮುಗ್ಧಕಿರಣಗಳನ್ನು ಹೊರಚಾಚಿದ್ದನು. ಹಾಲಿನಂತಹ ಬಿಳುಪುಳ್ಳ ಅಲೆಗಳು ತನ್ನ ಎಲ್ಲೆಯನ್ನು ಮೀರಿ ದಂಡೆಗೆ ಅಪ್ಪಳಿಸುತ್ತಿದ್ದವು. ಇದೆಲ್ಲವನ್ನು ಕಂಡಾಗ ನನ್ನ ಮನವರಳಿಕೊಂಡು ಪಯಣದ ಸಾರ್ಥಕತೆಯನ್ನು ಗರಿಬಿಚ್ಚಿ ನಲಿದಾಡಿತು. ದಿನನಿತ್ಯದ ಕರ್ಮಗಳೆಲ್ಲವನ್ನು ಮುಗಿಸಿಕೊಂಡು ಲಘು ಉಪಾಹಾರವನ್ನು ಸೇವಿಸಿ ಅಗೋಡಾ ಕೋಟೆಯೆಡೆಗೆ ಪ್ರಯಾಣ ಬೆಳೆಸಿದೆವು.

ಡಚ್ ಮತ್ತು ಮರಾಠರ ಆಕ್ರಮಣದಿಂದ ರಕ್ಷಣೆ ಪಡೆದುಕೊಳ್ಳಲು ಪೋರ್ಚುಗೀಸರು ಕ್ರಿ.ಶ 1622ರಲ್ಲಿ ಅಗುಡಾ ಕೋಟೆಯನ್ನು ನಿರ್ಮಿಸಿದ್ದರು. ಕೋಟೆಯ ಬುರುಜುಗಳು ದಾಳಿಕೋರರ ವೀಕ್ಷಣಾಲಯಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಪೋರ್ಚುಗೀಸ್ ಭಾಷೆಯಲ್ಲಿ 'ಅಗುವಾ' ಎಂದರೆ ನೀರು ಎಂದರ್ಥ. ಕೋಟೆಯ ಒಳಭಾಗದಲ್ಲಿ ಅಧಿಕ ಸಾಮರ್ಥ್ಯದ ಗ್ಯಾಲನ್ ನೀರು ಸಂಗ್ರಹಿಸುವ ತೊಟ್ಟಿ ಇದೆ. ಹಾಗಾಗಿಯೇ ಈ ಕೋಟೆಗೆ 'ಅಗುಡಾ' ಎಂಬ ಹೆಸರು ಪ್ರಾಪ್ತವಾಗಿದೆ. ಇಳಿಯಲು ಮತ್ತು ಏರಲು ಮೆಟ್ಟಿಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಇದು ತುಂಬಾ ಸ್ವಚ್ಛತೆಯಿಂದ ಕೂಡಿದ್ದು ಅಂದವಾದ ಕೋಟೆಯಾಗಿದೆ. ಕೋಟೆಯ ಮೇಲ್ಭಾಗವನ್ನು ಹತ್ತಿ ನೋಡಿದಾಗ ವಿಶಾಲವಾಗಿ ಕಂಗೊಳಿಸುತ್ತಿದ್ದ ವಾರಧಿಯು ನಮ್ಮೆಲ್ಲರ ಗಮನವನ್ನು ತನ್ನಡೆಗೆ ಕೇಂದ್ರೀಕರಿಸಿತು. ತುಂಬಾ ದಿನಗಳಿಂದ ಮೊಬೈಲ್ ಪರದೆಯನ್ನು ನೋಡಿದ್ದರಿಂದ ನನ್ನ ದೃಷ್ಟಿಯ ನಷ್ಟಕ್ಕೆ ಕಾರಣವಾಗಿತ್ತು. ಹಾಗಾಗಿಯೇ ತುಂಬ ಹೊತ್ತು ಸಮುದ್ರವನ್ನೇ ನೋಡುತ್ತ ನಿಂತೆ. ಕಣ್ಣಿಗೆ ಹಬ್ಬ, ಮನಸ್ಸಿಗೆ ಉಲ್ಲಾಸ ನೀಡುವುದರಲ್ಲಿ ಮೈಮರೆತಾಗ, ಬಾನಲ್ಲಿ ಭಾಸ್ಕರನು ದೃಷ್ಟಿಯು ತಾಕದಂತೆ ನಮ್ಮನ್ನು ಹೊರದೂಡಲು ಕಾರ್ಯನಿರತನಾಗಿದ್ದನು. ಅಲ್ಲಿಂದ ನೇರವಾಗಿ ಬೋಮ್ ಜೀಸಸ್ ಬೆಸಿಲಿಕಾ ಚರ್ಚ್ ಇದ್ದ ಸ್ಥಳದೆಡೆಗೆ ಪ್ರಯಾಣ ಬೆಳೆಸಿದೆವು.

ಗೋವಾ ರಾಜ್ಯದ ಒಳಗೆಲ್ಲ ಕಿರಿದಾದ ರಸ್ತೆಗಳು. ನಮ್ಮ ಪ್ರಯಾಣದ ಬಸ್ಸು ಕಿರಿದಾದ ರಸ್ತೆಗಳಲ್ಲಿ ಸಾಗಿದಾಗ ಸಿಕ್ಕಿಸಿಕೊಂಡು ಹೊರ ಬರಲು ಪರದಾಡಬೇಕಾಯಿತು. ಸ್ವಲ್ಪ ಭಯಭೀತರಾದ ನಾವು ಯಾವುದಕ್ಕೂ ಎದೆಗುಂದದೆ, ಬಸ್ ಚಾಲಕನಿಗೆ ಹಿಂದಿರುಗುವ ಹಾದಿಯನ್ನು ತೋರಿಸಿದೆವು. ಆದರೂ ಕೆಲವೊಂದು ಚಿಕ್ಕ ಹಾದಿಗಳಲ್ಲಿ ಸಾಗಿ, ಮತ್ತೆ ಮರಳಿ ಮುಖ್ಯ ರಸ್ತೆಗೆ ಮರಳಿದ ಹರಸಾಹಸವನ್ನು ನೋಡಿದರೆ ಆ ದಿನ ನಾವೆಲ್ಲರೂ ಚರ್ಚ್‌ಗೆ ತಲುಪಬಹುದೇ? ಅಥವಾ ಮರುದಿನ ತಲುಪಬಹುದಾ? ಎನ್ನುವ ಸಂದೇಹದಲ್ಲಿದ್ದೆವು. ಒಟ್ಟಿನಲ್ಲಿ ಬಸ್ಸು ಆಕಡೆಗೆ ಈಕಡೆಗೆ ಸುತ್ತಿಸಿಕೊಂಡು ಕೊನೆಗೆ ಬೋಮ್ ಜೀಸಸ್ ಬೆಸಲಿಕಾ ಚರ್ಚ್ ಇದ್ದ ಸ್ಥಳಕ್ಕೆ ಬಂದೇ ಬಿಟ್ಟಿತು.

ನಮ್ಮ ಭಾರತದಲ್ಲಿ ಸ್ಥಾಪನೆಯಾದ ಅತ್ಯಂತ ಹಳೆಯ ಚರ್ಚ್‌ಗಳಲ್ಲಿ ಗೋವಾದ ಬೆಸಲಿಕಾ ಚರ್ಚ್ ಕೂಡ ಒಂದಾಗಿದೆ. ಈ ಚರ್ಚಿನ ನಿರ್ಮಾಣದ ಕಾರ್ಯವು ಕ್ರಿ.ಶ 1594ರಲ್ಲಿ ಪ್ರಾರಂಭವಾಗಿ ಕ್ರಿ.ಶ 1605ರಲ್ಲಿ ಪೂರ್ಣಗೊಳಿಸಲಾಗಿದೆ. ಒಂದು ಮುಖ್ಯ ಪ್ರವೇಶ ದ್ವಾರವನ್ನು ಹೊಂದಿದ್ದು ಪ್ರವೇಶ ದ್ವಾರದಿಂದ ತೆರಳಿದರೆ ಬಲಿಪೀಠದ ಆರಾಧನಾ ಸ್ಥಳ, ಪಶ್ಚಾತ್ತಾಪದ ನಿಲುವು ಪೆಟ್ಟಿಗೆ, ಬಲಭಾಗಕ್ಕೆ ಸಂತ ಅಂತೋನಿ ಅವರ ಪ್ರತಿಮೆ ಇದೆ. ಎಡಭಾಗದಲ್ಲಿ ಸಂತ ಫ್ರಾನ್ಸಿಸ್ ಝೇವಿಯರ್ ಅವರ ಮೃತ ದೇಹವು ನಶಿಸದಂತೆ ಪೆಟ್ಟಿಗೆಯಲ್ಲಿ ಸುರಕ್ಷಿತವಾಗಿ

ಇರಿಸಲಾಗಿದೆ. ಬಹಳ ದಿನಗಳಿಂದಲೂ ಸಂತ ಫ್ರಾನ್ಸಿಸ್ ಝೇವಿಯರ್ ಅವರ ದೇಹವನ್ನು ಇಲ್ಲಿಯವರೆಗೆ ಹೇಗೆ ಸುರಕ್ಷಿತವಾಗಿ ಇರಿಸಲಾಗಿದೆನ್ನುವುದನ್ನು ಕಾಣಬೇಕೆನ್ನುವ ಆತುರದಲ್ಲಿದ್ದೆ. ಆದರೆ ಫಾ. ಪ್ರವೀಣ್ ಕುಮಾರ ಅವರು "ಸಂತ ಫ್ರಾನ್ಸಿಸ್ ಝೇವಿಯರ್ ಅವರ ಕಳೇಬರವನ್ನು ಹತ್ತು ವರ್ಷಗಳಿಗೊಮ್ಮೆ ಮಾತ್ರ ಜನಸಾಮಾನ್ಯರ ಪ್ರದರ್ಶನಕ್ಕೆ ಇರಿಸಲಾಗುವುದು. ಆ ದಿನಗಳು ತುಂಬ ಹತ್ತಿರದಲ್ಲಿವೆ. ಇದೇ ವರ್ಷ ಡಿಸೆಂಬರ್ ತಿಂಗಳ ಅವಧಿಯಲ್ಲಿ ಮೃತದೇಹ ಕಾಣುವ ಭಾಗ್ಯ ಎಲ್ಲರಿಗೂ ದೊರೆಯುವುದು" ಎಂದಾಗ ನನ್ನಾಸೆಗೆ ತಣ್ಣೀರು ಎರಚಿದಂತಾಯಿತು. ಏಕೆಂದರೆ ಮೃತ ದೇಹವನ್ನು ಕಾಣಲೇಬೇಕೆನ್ನುವ ಹಠ ನನ್ನದಾಗಿತ್ತು. ಆದರೂ ಸಂಗ್ರಹಿಸಿಡಲಾದ ಪೆಟ್ಟಿಗೆಯಿಂದ ಅವರ ಮೊಗ ಮತ್ತು ಎಡಭಾಗದ ಹಸ್ತ ಅಪೂರ್ಣವಾಗಿ ಕಂಡಾಗ ಉಲ್ಲಾಸಕ್ಕೆ ಪಾರವೇ ಇಲ್ಲ. ಅಂದು ಕಲ್ಪನೆಯಲ್ಲಿ ಕಂಡ ಕನಸುಗಳು ವಾಸ್ತವವಾದಾಗ ಸ್ವರ್ಗವೇ ಧರೆಗಿಳಿದು ಬಂದಂತಾಗಿತ್ತು. ಅಲ್ಲಿಂದ ಮುಂದೆ ಸಾಗಿದರೆ, ಕಲೆಯಲ್ಲಿ ಅರಳಿ ನಿಂತ ಸಂತ ಫ್ರಾನ್ಸಿಸ್ ಝೇವಿಯರ್ ಅವರ ಜೀವನದ ದೃಶ್ಯಗಳನ್ನು ಭಿತ್ತಿಯ ಮೇಲೆ ಕಾಣಬಹುದು. ಮೊದಲ ಮಹಡಿಯಲ್ಲಿ ಜೆಸ್ವಿಟ್ ಸಂತರ ಪ್ರತಿಮೆಗಳನ್ನು ಕಟ್ಟಿಗೆಯಲ್ಲಿ ಕೆತ್ತಲಾಗಿದೆ. ಎಲ್ಲ ಸಂತರ ಪ್ರತಿಮೆಗಳನ್ನು ನೋಡುತ್ತಾ ಮುಂದೆ ಸಾಗಿದಾಗ ಸಂತ ಇಗ್ನೇಷಿಯಸ್ ಲೊಯೋಲ ಅವರ ಪ್ರತಿಮೆಯನ್ನು ಕಂಡು ಕಣ್ಣಾಲಿ ತೇವಗೊಂಡವು. ಅಲ್ಲಲ್ಲಿ ಸುತ್ತಾಡಿ ನಿರ್ಗಮಿಸುವ ದ್ವಾರದಿಂದ ಹೊರ ನಡೆದೆವು. ಮಧ್ಯಾಹ್ನದ ವೇಳೆಯಾಗಿದ್ದರಿಂದ ನಮ್ಮೆಲ್ಲರ ಉದರ ತಾಳ ಹಾಕುತ್ತಿತ್ತು. ಅಲ್ಲಿಂದ ನೇರವಾಗಿ ನಮ್ಮ ಬಸ್ ಹತ್ತಿರ ತೆರಳಿದೆವು. ಅಷ್ಟೊತ್ತಿಗಾಗಲೇ ಊಟದ ವ್ಯವಸ್ಥೆಯನ್ನು ಸಿದ್ಧಪಡಿಸಲಾಗಿತ್ತು. ಎಲ್ಲರೂ ಊಟಮಾಡಿಕೊಂಡು ಸಮಯ ಸಾಯಂಕಾಲ 3:30ಕ್ಕೆ ಗೋವಾ ರಾಜ್ಯದಿಂದ ನಿರ್ಗಮಿಸಿದೆವು.

ಬೆಳಗಾವಿ ಜಿಲ್ಲೆಯ ರಾಮನಗರ ತಾಲೂಕಿನ ಬಸ್ ನಿಲ್ದಾಣಕ್ಕೆ ಬಂದಾಗ ಸಾಯಂಕಾಲ 7:00 ಗಂಟೆ ಆಗಿತ್ತು. ಹತ್ತಿರದಲ್ಲಿರುವ ಹೋಟೆಲ್‌ನಲ್ಲಿ 15 ರೂಪಾಯಿಗಳನ್ನು ಕೊಟ್ಟು ಕಲಿಯುಗದ ಅಮೃತವನ್ನು ಸೇವಿಸಿದೆ. ಅಲ್ಲಿಯವರೆಗೆ ಒಂದು ರೂಪಾಯಿ ಸಹ ನನ್ನಿಂದ ಖರ್ಚಾಗಿದ್ದಿಲ್ಲ ಹಾಗಂತ ಜಿಪುಣನೆಂದು ಭಾವಿಸದಿರಿ. ಏಕೆಂದರೆ ಅಡುಗೆ ವ್ಯವಸ್ಥೆಯನ್ನು ನೋಡಿಕೊಳ್ಳಲು ನ್ಯಾಷನಲ್ ಡಾಬಾ ಮಾಲಿಕ ಲತೀಫ್ ಅವರನ್ನು ಕರೆದುಕೊಂಡು ಹೋಗಿದ್ದೆವು. ನಾವೆಲ್ಲರೂ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿಕೊಂಡು ಬರುವ ವೇಳೆಗೆ ಸಸ್ಯಾಹಾರ ಮತ್ತು ಮಾಂಸಾಹಾರವನ್ನೆಲ್ಲ ರುಚಿರುಚಿಯಾಗಿ ಸಿದ್ಧಪಡಿಸುತ್ತಿದ್ದನು. ನಾನಂತೂ ಹೊಟ್ಟೆ ತುಂಬುವಷ್ಟು ಆಹಾರವನ್ನು ಸೇವಿಸುತ್ತಿದ್ದೆ. ಎಲ್ಲರೂ ಚಹಾ ಕುಡಿದ ನಂತರ ಅಲ್ಲಿಂದ ತೆರಳಿದೆವು. ಅಲ್ಲಿಯವರೆಗೆ ಹೊಟ್ಟೆ ತಾಳಹಾಕುವುದನ್ನು ಮರೆಸಲು ಕೆಲವರು ಧಮ್ ಚರಾಡ್ಸ್ ಸ್ಪರ್ಧೆಯಲ್ಲಿ ಭಾಗವಹಿದರು. ನಾನಂತೂ ಶಶಿಕಲಾ ಮೇಡಂ ಅವರು ತಂದಿದ್ದ ಶೇಂಗಾ ಹೋಳಿಗೆ ಮತ್ತು ಪ್ರತಿಭಾ ಚೈತ್ರಾ ಮೇಡಂ ಅವರು ತಯಾರಿಸಿಕೊಂಡು ತಂದಿದ್ದ ಚುರುಮುರಿ ಮಂಡಕ್ಕಿಯನ್ನು ಹೋಗುವಾಗ ಮತ್ತು ಬರುವಾಗಲೂ ತಿನ್ನುತ್ತ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೆ. ಹುಬ್ಬಳ್ಳಿಗೆ ಬಂದಾಗ ಸಮಯ 10:00 ಗಂಟೆಯಾಗಿತ್ತು. ನಗರದ ಹೊರಭಾಗದಲ್ಲಿರುವ ವಿಶಾಲವಾದ ಸ್ಥಳದಲ್ಲಿ ಅಡುಗೆ ತಯಾರಿಸಿ, ಊಟ ಮಾಡಿದ ನಂತರ ಅಲ್ಲಿಂದ ತೆರಳಿದೆವು. ಬಸ್ ಸೀಟ್‌ಗಳು ನಿದ್ರಿಸಲು ಅಷ್ಟೊಂದು ಸೂಕ್ತವಾಗಿದ್ದಿಲ್ಲ. ಅವುಗಳ ಅಸ್ತವ್ಯಸ್ತದಿಂದಾಗಿ ಇರುಳೆಲ್ಲ ಕಣ್ಣಿಗೆ ನಿದ್ದೆಯಿಲ್ಲ. ರೆಪ್ಪೆಗಳು ಅರೆನಿದ್ರಾವಸ್ಥೆಯಿಂದಾಗಿ ಭಾರವಾಗಿದ್ದವು. ದಿನಾಂಕ 12/02/2024 ರಂದು ಮಾನವಿ ತಲುಪಿದಾಗ ಬೆಳಿಗ್ಗೆ 5:00 ಗಂಟೆ ಆಗಿತ್ತು.

**ಪರಾಮರ್ಶನ ಗ್ರಂಥಗಳು**


1. ಸಮನ್ವಿತೆ ಗೋಮಾಂತ - ಸುಧಾ ಚಿದಾನಂದಗೌಡ
2. ಮಹದಾಯಿ ನೀರಿಗಾಗಿ ಹೋರಾಟ - ಎಂ. ಕೆ ಹೆಗಡೆ
3. ಗೋವಾ ನನ್ನ ತವರು ಮನೆ - ಡಾ. ಸಂಗಮೇಶ ತಮ್ಮನಗೌಡ್ರು
4. ಇದು ಗೋವಾ! ಇದು ಗೋಮಾಂತಕ - ಆಗುಂಬೆ ಎಸ್ ನಟರಾಜ್